ಸಮುದಾಯ ಬೇಸಾಯದ ಪ್ರಾಮುಖ್ಯತೆಯನ್ನು, ವಿವಿಧ ಆಧುನಿಕ ಕೃಷಿ ತಾಂತ್ರಿಕತೆಗಳಾದ ನೀರಾವರಿ ತಾಂತ್ರಿಕತೆ ಮತ್ತು ಜಲ ಸಂರಕ್ಷಣೆ, ಹಸಿರು ಮನೆ ತರಕಾರಿ ಉತ್ಪಾದನೆ, ಸಮುದಾಯ ಬೇಸಾಯ, ಮತ್ತು ಕೃಷಿ ಯಂತ್ರೋಪ ಕರಣಗಳ ಬಳಕೆ ಬಗ್ಗೆ ಅರಿವು ಪಡೆದಿರುತ್ತಾರೆ.

ಬಡ್ಡಿದರ

1922(1095); ಶ್ರೀ ಲಕ್ಷಣ ಸಂಗಪ್ಪ ಸವದಿ (ಅಥಣಿ)

ಅ) 2013–14 ಮತ್ತು 2014–15 ನೇ ಸಾಲಿನಲ್ಲಿ ಸರ್ಕಾರವು ವಿವಿಧ ಹಂತಗಳಲ್ಲಿ ಸಹಕಾರ ಸಂಘಗಳಿಗೆ ಮತ್ತು ರೈತರಿಗೆ ನಿಗದಿಪಡಿಸಿರುವ ಬಡ್ಡಿ ದರ (Rate of Interest) ಎಷ್ಟು;

ಆ) ಒಂದು ವೇಳೆ ಈವರೆಗೆ ಬಡ್ಡಿ ದರ (Rate of Interest) ನಿಗದಿ ಪಡಿಸದಿದ್ದಲ್ಲಿ ಅದಕ್ಕೆ ಕಾರಣಗಳೇನು; ಬಡ್ಡಿ ದರ ನಿಗದಿಪಡಿಸುವಲ್ಲಿ ವಿಳಂಬವಾಗಿರುವುದರಿಂದ ಸಹಕಾರ ಸಂಘಗಳಿಗೆ ಮತ್ತು ರೈತರಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) 2013–14 ಮತ್ತು 2014–15 ನೇ ಸಾಲಿನ ಬಡ್ಡಿ ದರ (Rate of Interest) ನಿಗದಿಪಡಿಸಲು ಸರ್ಕಾರವು ಕಾಲಮಿತಿ ಹಾಕಿಕೊಂಡಿದೆಯೇ?

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ (ಮಾನ್ಯ ಸಹಕಾರ ಹಾಗೂ ಸಕ್ಕರೆ ಸಚಿವರು)

ಅ) ಕೃಷಿ ಸಾಲಗಳ ಮೇಲಿನ ಬಡ್ಡಿ ರಿಯಾಯಿತಿ ಯೋಜನೆಯಡಿಯಲ್ಲಿ 2013–14 ನೇ ಸಾಲಿನಲ್ಲಿ ಸಹಕಾರ ಸಂಸ್ಥೆಗಳಿಂದ ರೈತರು ಪಡೆದಿರುವ `2.00 ಲಕ್ಷದವರೆಗಿನ ಬೆಳೆ ಸಾಲಗಳಿಗೆ ಶೂನ್ಯ ಬಡ್ಡಿ ದರ ಹಾಗೂ `2.00 ಲಕ್ಷದಿಂದ ರೂ.3.00 ಲಕ್ಷದವರೆಗಿನ ಬೆಳೆ ಸಾಲಗಳಿಗೆ ಶೇ. 100 ರ ಬಡ್ಡಿ ದರ ಅನ್ವಯವಾಗುತ್ತದೆ. ` 10.00 ಲಕ್ಷದವರೆಗಿನ ಮಧ್ಯಮಾವಧಿ ಹಾಗೂ ಧೀರ್ಘಾವಧಿ ಕೃಷಿ ಸಾಲಗಳಿಗೆ ಶೇ. 3.00 ಬಡ್ಡಿ ದರ ಅನ್ವಯವಾಗುತ್ತದೆ.

2013–14 ನೇ ಸಾಲಿಗೆ ಮಧ್ಯಮಾವಧಿ ಹಾಗೂ ಧೀರ್ಘಾವಧಿ ಕೃಷಿ ಸಾಲಗಳಿಗೆ ಡಿಸಿಸಿ ಬ್ಯಾಂಕಿನಿಂದ ವಿತರಿಸಿದ ಸಾಲಗಳಿಗೆ ಶೇ. 8.50 ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ವಿತರಿಸಿದ ಸಾಲಗಳಿಗೆ ಶೇ.9.50 ರ ಬಡ್ಡಿ ಸಹಾಯಧನದ ದರ ನಿಗದಿ ಪಡಿಸಲಾಗಿದೆ. ಬೆಳೆ ಸಾಲಕ್ಕೆ ಸಂಬಂಧಿಸಿದಂತೆ ಸಹಕಾರ ಸಂಸ್ಥೆಗಳಿಗೆ ಬಡ್ಡಿ ಸಹಾಯಧನದ ದರ ನಿಗದಿಪಡಿಸಲು ಕ್ರಮ ಕೈಗೊಳ್ಳಲಾಗಿದೆ.

2014–15 ನೇ ಸಾಲಿಗೆ ರೈತರಿಗೆ ಹಾಗೂ ಸಹಕಾರ ಸಂಸ್ಥೆಗಳಿಗೆ ಬಡ್ಡಿ ದರ ನಿಗದಿಪಡಿಸಲು ಕ್ರಮಕೈಗೊಳ್ಳಲಾಗುವುದು.

ಆ) 2013–14 ನೇ ಸಾಲಿಗೆ ಬೆಳೆ ಸಾಲಕ್ಕೆ ಸಂಬಂಧಿಸಿದಂತೆ ಸಹಕಾರ ಸಂಸ್ಥೆಗಳಿಗೆ ಬಡ್ಡಿ ಸಹಾಯಧನದ ದರವನ್ನು ನಿಗದಿಪಡಿಸುವ ಪ್ರಸ್ತಾಪನೆ ಪರಿಶೀಲನೆಯಲ್ಲಿದ್ದು, ಶೀಘ್ರದಲ್ಲಿ ಬಡ್ಡಿ ಸಹಾಯಧನದ ದರವನ್ನು ನಿಗದಿಪಡಿಸಲಾಗುವುದು.

2014–15 ನೇ ಸಾಲಿಗೆ ಸಹಕಾರ ಸಂಸ್ಥೆಗಳಿಗೆ ಬಡ್ಡಿ ಸಹಾಯಧನದ ದರಗಳನ್ನು ಕೇಂದ್ರ ಸರ್ಕಾರ ನೀಡುವ ಬಡ್ಡಿ ಸಬ್‌ವೆನ್‌ಷನ್ ದರ ಹಾಗೂ ಪ್ರೋತ್ಸಾಹಧನದ ದರಗಳನ್ನು ಆಧರಿಸಿ ಬಡ್ಡಿ ಸಹಾಯಧನದ ದರ ಗಳನ್ನು ನಿಗದಿಪಸಿಸಬೇಕಿದ್ದು, ಕೇಂದ್ರ ಸರ್ಕಾರದಿಂದ ಈವರೆಗೆ ಈ ದರಗಳು ನಿಗದಿಯಾಗಿರುವ ಬಗ್ಗೆ ನಬಾರ್ಡ್ ಸುತ್ತೋಲೆ ನೀಡಿರು ವುದಿಲ್ಲ. ಈ ದರಗಳನ್ನು ನಿಗದಿಪಡಿಸಲು ಕಾಲಾವಕಾಶ ಇರುತ್ತದೆ.

2013–14 ನೇ ಸಾಲಿಗೆ ಸಂಬಂಧಿಸಿದಂತೆ ಬಡ್ಡಿ ದರ ನಿಗದಿ ಪಡಿಸುವಲ್ಲಿ ವಿಳಂಭವಾಗಿರುವುದರಿಂದ ರೈತರು ಸಾಲ ಮರುಪಾವತಿ ಸಲು ಯಾವುದೇ ತೊಂದರೆಯಾಗಿರುವುದಿಲ್ಲ. ಸಹಕಾರ ಸಂಸ್ಥೆಗಳಿಗೆ ಸಂಬಂಧಿಸಿದಂತೆ 2013–14 ನೇ ಸಾಲಿನಲ್ಲಿ ವಿತರಿಸಿದ ಬೆಳೆ ಸಾಲಗಳನ್ನು ವಸೂಲಾತಿ ಆಧಾರವಾಗಿ ಪ್ರತೀ ತ್ರೈಮಾಸಿಕ ಮುಗಿದ ನಂತರದ ಒಂದು ತಿಂಗಳೊಳಗಾಗಿ ಬಿಲ್ಲನ್ನು ಸಹಕಾರ ಸಂಸ್ಥೆಗಳು ತಯಾರಿಸಬೇಕಿದ್ದು, 2014–15 ನೇ ಸಾಲಿನ ಜೂನ್ ತ್ರೈಮಾಸಿಕ

ಈಗಷ್ಟೇ ಮುಗಿದಿದ್ದು ಬಿಲ್ಲು ತಯಾರಿಸಲು ವಿಳಂಭವಾಗಿರುವುದು ಗಮನಕ್ಕೆ ಬಂದಿದ್ದು. ಕೂಡಲೇ ದರ ನಿಗದಿಪಡಿಸಲು ಕ್ರಮ ತೆಗೆದು ಕೊಳ್ಳಲಾಗುವುದು.

ಇ) 2013–14 ನೇ ಸಾಲಿಗೆ ಸಂಬಂಧಿಸಿದಂತೆ ಸಹಕಾರ ಸಂಸ್ಥೆಗಳಿಗೆ ಸರ್ಕಾರ ನೀಡಬೇಕಾದ ಬಡ್ಡಿ ಸಹಾಯಧನದ ದರವನ್ನು ನಿಗದಿ ಪಡಿಸುವ ಪ್ರಕ್ರಿಯೆ ಈಗಾಗಲೇ ಜಾರಿಯಲ್ಲಿದ್ದು, ಶೀಘ್ರದಲ್ಲಿಯೇ ದರ ನಿಗದಿಪಡಿಸಲಾಗುವುದು.

2014–15 ನೇ ಸಾಲಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ನೀಡುವ ದರಗಳನ್ನು ನಬಾರ್ಡ್ ತಿಳಿಸಿದ ನಂತರ ಬಡ್ಡಿ ಸಹಾಯಧನದ ದರವನ್ನು ನಿಗದಿಪಡಿಸಲಾಗುವುದು.

ಮಲ್ಲಿಗೆ ಕೃಷಿ

1924(2880); ಶ್ರೀ ಲೋಬೋ ಜೆ.ಆರ್. (ಮಂಗಳೂರು ನಗರ ದಕ್ಷಿಣ)

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಮಲ್ಲಿಗೆ ಕೃಷಿಯಲ್ಲಿ ತೊಡಗಿರುವ ಕೃಷಿಕರೆಷ್ಟು, ವಿಸ್ತೀರ್ಣ ಎಷ್ಟು (ವಿವರ ನೀಡುವುದು);

ಆ) ಮಲ್ಲಿಗೆ ಹೂವನ್ನು ರಫ್ತು ಮಾಡಲಾಗುತ್ತಿದೆಯೇ, ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಮಾಡಲಾಗಿರುವ ರಫ್ತು ಪ್ರಮಾಣವೆಷ್ಟು, ಯಾವ ಯಾವ ದೇಶಗಳಿಗೆ ರಫ್ತಾಗಿರುತ್ತದೆ. (ವಿವರ ನೀಡುವುದು);

ಇ) ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಲ್ಲಿಗೆ ಹೂವು ಹಾಗೂ ಇತರೆ ಫಲಪುಷ್ಪಗಳನ್ನು ರಫ್ತು ಮಾಡಲು ಸರ್ಕಾರದಿಂದ ಯಾವ ಸೌಲಭ್ಯವನ್ನು ಕಲ್ಪಿಸಲಾಗಿದೆ?